## ಸ್ಥಿರಸ್ವತ್ತಿನ ಹರಾಜು ಒಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 17ನೇ ಜನವರಿ 1903, ಚಿಕ್ಕಮಗಳೂರು.

1. ಕಂದಾಯದ ಬಾಕೀದಾರರಾದ ಪವತಿ ಮೆ|| ಜೆ. ಎಂ. ಬ್ರಿಟೋ ಕುಟುಂಬ ಎಸ್. ಎಸ್. ಕೋಯಿಲೊ ಯವರಿಂದ ಬರ ಬೇಕಾದ ಜಮಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಹಿಡುವಳಿದಾರ್ರ ಹಕ್ಕು ಬಾಧ್ಯತೆ ಕಳಕೊಂಡದ್ದಾಗಿ ಕಂಡೋಕ್ತವಾಗಿ ನಮೂದಾದ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಕಚೇರಿಯಲ್ಲಿ ಸೆಕಂಡ್ ಅ|| ಕ|| ರವರು 1903ನೇ ಇಸವಿ ಮಾರ್ಚಿ ತಾರೀಖು 3ನೇ ಮಂಗಳವಾರದ ದಿವಸ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜು ಮೊಬಲಗಿನ ಕೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಖಾಬಿತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

3. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಖಾಬಿತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

4. ಹರಾಜನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುಖ್ತಾರೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತನ್ನ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅಪರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

5. ಹರಾಜನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರರಾಗಲೀ ಅವರ ತರಫಿನ ವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟು ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ನ್ಯೂನ್ಯತೆಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟು ವಾ ದಿಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

| ತಾಲ್ಲೂಕು. | ಹೋಬಳಿ. | ಗ್ರಾಮ. | ಬಾಕೀದಾರರ ಹೆಸರು. | ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು. | ಅಂದಾಜು ಕಿಮ್ಮತ್ತು. | ಜಮೀನು. ನಂಬರು ಅಥವಾ ಜಮೀನಿನ ಹೆಸರು. | ಖುಷ್ಕಿ, ತರೀ ಅಥವಾ ಬಾಗಾಯತು. | ವಿಸ್ತೀರ್ಣ. | ಅಂದಾಜು. | ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. |
|---|---|---|---|---|---|---|---|---|---|---|
| | | | | | | | | ಎ. ಗು. | ರೂ. ಆ. ಪೈ. | ರೂ. ಆ. ಪೈ. |
| | | | | ಸರ್ವೆ ನಂಬರು 9ರಲ್ಲಿ. | | 4 | ಕಾಫಿ | 151 2 | 227 0 0 | 420 0 0 |
| | | | | 1 ಬಂಗಲೆ | ರೂ. 25 0 0 | 7 | ಡಿಟೋ | 4 0 | 4 0 0 | 705 0 0 |
| | | | | 4 ಕೂಲಿ ಲೈನು. | 18 0 0 | 9 | ಡಿಟೋ | 50 0 | 75 0 0 | 73 10 0 |
| | | | | | | 46 | ಡಿಟೋ | 350 19 | 525 0 0 | 1 0 0 |
| ಮೂಡಿಗೆರೆ | ಕಳಸ | ತಲಗೋಡು | ಜೆ|| ಎಂ. ಬ್ರಿಟೊ ಇವರು ಪವತ್ತಿ ಕುಟುಂಬ ಎಸ್. ಎಸ್. ಕೊಯಿಲೊ ಯವರು. | | | | | 555 21 | 831 0 0 | 1672 10 0 |

ಅವಸೆಟ್ ಪ್ರೈಸ್
ಬಾಂದು ನಾಶಪಡಿಸಿದ ಬಗ್ಯೆ ವಿಧಿಶಿರುವ ಡಜರ್ಮಾನೆ.
ಹಿಂದಿನ ಸಾಲು ಕಂದಾಯ.
ಲೋಕಲ್ ಫಂಡು
ನೋಟಿಸು ಇಸ್ತಿಹಾರ್ ಫೀ.
ಈರೀತಿ ವಸೂಲ್ ಬರಬೇಕಾಗಿರುತ್ತೆ. ಇದಲ್ಲದೆ ಹರಾಜು ಆಗುವ ತಾರೀಖಿನವರಿಗಿನ ಬಡ್ಡಿ ಸಹ ಲೆಖ್ಖಾಚಾರವಾಗಿ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪಿ. ಜೆ. ಡಿಸೋಜ,
ಘಾರ್ ಡೆಪ್ಯುಟಿ ಕಮಿಷನರ್.